ಅಮಲ್ಜಾರಿ ಸಂಖ್ಯೆ 11/2014
ಪಿ.ಡಬ್ಲ್ಯೂ -2

ದಿಃ **01.04.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು**.**

ಮುಂದುವರಿದ ಪಾಟೀ ಸವಾಲುಃ ಡಿಕ್ರಿ ಹೋಲ್ಡರ್ ನಂಬರ **1** ಬಿ ಡಿ ಇ ಎಫ್ ಪರ ಶ್ರೀ ಬಿ ಹೆಚ್ ವಕೀಲರಿಂದಃ **-**

ನಿಮ್ಮ ಮಕ್ಕಳಿಗೆ ಶಾಲೆಗೆ ಸೇರಿಸಿದಾಗ ಯಾರು ಮಾಹಿತಿ ಕೊಟ್ಟರು ಎಂದರೆ ನಾನೇ ಕೊಟ್ಟಿರುತ್ತೇನೆ ಎನ್ನುತ್ತಾರೆ. ಸಾಮಾನ್ಯವಾಗಿ ತಂದೆ ಏನು ಮಾಹಿತಿ ಕೊಡುತ್ತಾರೆ ಅದೇ ರೀತಿ ಶಾಲೆಯಲ್ಲಿ ಪ್ರವೇಶ ಅರ್ಜಿಯಲ್ಲಿ ಬರೆದುಕೊಳ್ಳುತ್ತಾರೆ ಎಂದರೆ ಸರಿ. ನಿ ಪಿ 8 ರಲ್ಲಿ ಅಶ್ವಿನಿ ನಂಜನಗೌಡ ರ ತಂದೆಯ ಹೆಸರು ಏನೆಂದು ಬರೆದಿದೆ ಎಂದರೆ ನಾಗೇಂದ್ರಪ್ಪ ಎಂದು ಬರೆಯಲಾಗಿದೆ ಆದರೆ ಸದರಿ ದಾಖಲೆಯನ್ನು ಸೃಷ್ಟಿ ಮಾಡಿದ ದಾಖಲೆ ಎನ್ನುತ್ತಾರೆ. ನಿ ಪಿ 9 ಮತ್ತು ನಿ ಪಿ 10 ರಲ್ಲಿ ತಂದೆಯ ಹೆಸರು ಏನು ಬರೆಯಲಾಗಿದೆ ಎಂದರೆ ನಾಗೇಂದ್ರಪ್ಪ ಎಂದು ಬರೆಯಲಾಗಿದೆ ಸದರಿ ದಾಖಲೆ ಕೂಡ ಸೃಷ್ಟಿ ಮಾಡಲಾಗಿದೆ ಎನ್ನುತ್ತಾರೆ. ಯಾವುದೇ ಶಾಲೆಯಲ್ಲಿ ಜನನ ಪ್ರಮಾಣ ಪತ್ರವನ್ನು ಮತ್ತು ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆಯಬೇಕಾದರೆ ಶಾಲೆಯಲ್ಲಿ ಏನು ದಾಖಲಾಗಿರುತ್ತದೆ ಅದನ್ನೆ ಕೊಡುತ್ತಾರೆ ಎಂದರೆ ಸರಿ. ಅದೇ ರೀತಿ ನಿ ಪಿ 8 ರಿಂದ ನಿ ಪಿ 10 ರ ದಾಖಲಾತಿಗಳಲ್ಲಿ ಶಾಲೆಯಲ್ಲಿ ಏನು ದಾಖಲಾಗಿರುತ್ತದೆಯೋ ಅದನ್ನೇ ಕೊಟ್ಟಿದ್ದಾರೆ ಎಂದರೆ ಸರಿಯಿಲ್ಲ. ಅದೇ ರೀತಿ ನಿ ಪಿ 2 ರಲ್ಲಿ ಚುನಾವಣಾ ಗುರುತಿನ ಚೀಟಿಯಲ್ಲಿ ರತ್ನಮ್ಮ ನವರ ಗಂಡನ ಹೆಸರು ಏನು ಬರೆದಿದೆ ಎಂದು ನೋಡಿ ಹೇಳಿ ಎಂದರೆ ನಾಗೇಂದ್ರಪ್ಪ ಎನ್ ಜಿ ಅಂತಾ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ನನ್ನ ತಾಯಿ ಲಲಿತಮ್ಮ ರವರನ್ನು ಬಿಟ್ಟು ನಾಗೇಂದ್ರಪ್ಪ ಬೇರೆ ಯಾರನ್ನು ಮದುವೆ ಆಗಿರುವುದಿಲ್ಲಾ ಸದರಿ ದಾಖಲೆಗಳು ಸೃಷ್ಟಿ ಮಾಡಿದ ದಾಖಲೆಗಳು ಎನ್ನುತ್ತಾರೆ. ನಿ ಪಿ 2 ರ ಚುನಾವಣಾ ಗುರುತಿನ ಚೀಟಿಯಲ್ಲಿ ಅಶ್ವಿನಿ ಎನ್ ಅವರ ತಂದೆಯ ಹೆಸರು, ಅಮೃತವರ್ಷಿಣಿ ಎನ್ ನಂಜನಗೌಡರ ಮತ್ತು ರಾಜೇಶ್ವರಿ ನಂಜನಗೌಡರ್ ಇವರ ತಂದೆಯ ಹೆಸರು ನಾಗೇಂದ್ರಪ್ಪ ಎನ್ ಜಿ ಎಂದು ಇರುತ್ತದೆ ಎಂದರೆ

ಇರುತ್ತದೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಸದರಿ ದಾಖಲೆ ಗಳು ಸೃಷ್ಟಿ ಮಾಡಿದ ದಾಖಲೆಗಳು ಎನ್ನುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯ ಮೇಲೆ ಇರುವ ಸಹಿ ಯಾರದ್ದು ಎಂದರೆ ನನ್ನ ತಂದೆಯ ಸಹಿ ಎನ್ನುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ನಿ ಪಿ 15 ಎಂದು ಗುರುತಿಸಲಾಯಿತು. ನಿಮ್ಮ ತಂದೆಯವರು ಮೋರಿಗೇರಿ ಗ್ರಾಮದ ಪದವಿ ಪೂರ್ವ ಕಾಲೇಜಿನಲ್ಲಿ ಇರುವಾಗ ನೀವೃತ್ತಿ ಹೊಂದಿದ್ದರು ಎಂದರೆ ಸರಿ. ಅವರು ನೀವೃತ್ತಿ ಹೊಂದುವ ಸಮಯದಲ್ಲಿ ಕುಟುಂಬಕ್ಕೆ ಬೇಕಾದ ಎಲ್ಲಾ ಮಾಹಿತಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹೆಂಡತಿಯ ಹೆಸರನ್ನು ಬಿಟ್ಟು ಬೇರೆ ಯಾರ ಹೆಸರನ್ನು ಅವರು ದಾಖಲೆ ಸಲ್ಲಿಸಿಲ್ಲಾ. ನಿ ಪಿ 15 ರಲ್ಲಿ ಮಾಹಿತಿ ನೀಡಿರುವ ದಾಖಲೆಯಲ್ಲಿ ಯಾರ ಯಾರ ಹೆಸರು ಇದೆ ಎಂದರೆ ಶ್ರೀಮತಿ ಲಲಿತಮ್ಮ ಅಶೋಕ್ ಎನ್ ನಂಜನಗೌಡ, ಅಶ್ವಿನಿ ಎನ್ ನಂಜನಗೌಡ, ರಾಜೇಶ್ವರಿ ಎನ್ ನಂಜನಗೌಡ, ಅಮೃತ ಎನ್ ನಂಜನಗೌಡರ ಎಂದು ದಾಖಲಾಗಿರುತ್ತದೆ. ಅದರ ಕೆಳಗೆ ನನ್ನ ತಂದೆ ಸಹಿ ಇರುತ್ತದೆ. ನಿ ಪಿ 15 ರಲ್ಲಿ ಶ್ರೀಮತಿ ಲಲಿತಮ್ಮ ಎಂಬುವರು ಪತ್ನಿ, ಅಶೋಕ ಎನ್ ನಂಜನಗೌಡ ಮಗ, ಅಶ್ವಿನಿ ಎನ್ ನಂಜನಗೌಡ ಮಗಳು, ರಾಜೇಶ್ವರಿ ಎನ್ ನಂಜಗೌಡ ಮಗಳು, ಅಮೃತ ಎನ್ ನಂಜನಗೌಡ ಮಗಳು ಎಂದು ಬರೆಯಲಾಗಿದೆ.

**(**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು**.)**
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ .